# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟೆ

## ಟೆಂಡರ್ ಅಧಿಸೂಚನೆ ಸಂಖ್ಯೆ: 02 /2024.

## ದಿನಾಂಕ: 06/04/2024.

ವಿಷಯ: ಮುಧೋಳ ನ್ಯಾಯಾಲಯದ ಆವರಣದಲ್ಲಿರುವ 6X4 ಪೂಟ್ ಖುಲ್ಲಾ ಜಾಗೆಯಲ್ಲಿ / ಈ ಮೊದಲು ಹಂಚಿಕೆಯಾದ ವ್ಯಕ್ತಿ ನಿರ್ಮಿಸಿದ ತಾತ್ಕಾಲಿಕ ಕಟ್ಟಡದಲ್ಲಿ ಝುರಾಕ್ಸ ಮಶಿನ್ ನಡೆಸಲು ಆಸಕ್ತಿದಾರರಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಕರೆಯುವ ಕುರಿತು.

-----

ಈ ಕೆಳಗೆ ಸಹಿ ಮಾಡಿದವರು ಈ ಟೆಂಡರ್ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ಮುಧೋಳ ನ್ಯಾಯಾಲಯದ ಆವರಣದಲ್ಲಿರುವ 6X4 ಪೂಟ್ ಖುಲ್ಲಾ ಜಾಗೆಯಲ್ಲಿ / ಈ ಮೊದಲು ಹಂಚಿಕೆಯಾದ ವ್ಯಕ್ತಿ ನಿರ್ಮಿಸಿದ ತಾತ್ಕಾಲಿಕ ಕಟ್ಟಡದಲ್ಲಿ ಝುರಾಕ್ಸ ಮಶಿನ್ ಅಳವಡಿಸಿಕೊಂಡು ವ್ಯಾಪಾರ ವಹಿವಾಟು ನಡೆಸಲು ಆಸಕ್ತಿದಾರರಿಂದ ನಿಗಧಿತ ನಮೂನೆಯಲ್ಲಿ ಗೌರವಾನ್ವಿತ ಉಚ್ಛ ನ್ಯಾಯಾಲಯದ ಸುತ್ತೋಲೆ LCA-I/MISC/2001, ದಿನಾಂಕ: 23-01-2001 ಹಾಗೂ ಸುತ್ತೋಲೆ ಸಂಖ್ಯೆ: 01/2005 ದಿನಾಂಕ:13-06-2005 ಇವುಗಳಲ್ಲಿ ವಿಧಿಸಲಾದ ನಿಯಮಗಳ ಹಾಗೂ ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಮುಚ್ಚಿದ ಲಕೋಟೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಟೆಂಡರ್ ಅಧಿಸೂಚನೆ ಪ್ರತಿಯನ್ನು ಹಾಗೂ ಅರ್ಜಿಯ ನಮೂನೆಯನ್ನು ಜಿಲ್ಲಾ ನ್ಯಾಯಾಲಯದ ಅಧಿಕೃತ ಅಂತರ್ ಜಾಲತಾಣವಾದ https://bagalkot.dcourts.gov.in ರಲ್ಲಿ ಪಡೆಯಬಹುದಾಗಿದೆ.

| | | |
|---|---|---|
| 01. | ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ | 08-04-2024 |
| 02. | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 07-05-2024<br>ಸಂಜೆ **05-00**<br>ಗಂಟೆಯವರೆಗೆ ಮಾತ್ರ |

ಈ ಮೇಲೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜೆ ಎಂದು ಘೋಷಿಸಿದ ಪಕ್ಷದಲ್ಲಿ ನಂತರದ ಕೆಲಸದ ದಿನವು ಕೊನೆಯ ದಿನಾಂಕವೆಂದು ಪರಿಗಣಿಸಲಾಗುವುದು.

## ಷರತ್ತುಗಳು

01. ಆಸಕ್ತಿಯುಳ್ಳ ಟೆಂಡರುದಾರರು ನಿಗದಿಪಡಿಸಿದ ನಮೂನೆಯಲ್ಲಿ ಟೆಂಡರುಗಳನ್ನು ಮುಚ್ಚಿದ ಲಕೋಟೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬಾಗಲಕೋಟೆ ಇವರ ವಿಳಾಸಕ್ಕೆ ಸಲ್ಲಿಸತಕ್ಕದ್ದು.

02. ಆಸಕ್ತ ಅರ್ಜಿದಾರರು ಟೆಂಡರ್ ದಸ್ತಾವೇಜಿನೊಂದಿಗೆ ರೂ.5,000/-ಗಳ ಮುಖಬೆಲೆಯುಳ್ಳ EMD ಮೊಬಲಗನ್ನು Prl. District and Sessions Judge, Bagalkote ಇವರ ಹೆಸರಿನಲ್ಲಿ ತೆಗೆದ ರಾಷ್ಟ್ರೀಕೃತ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ ರೂಪದಲ್ಲಿ ಸಲ್ಲಿಸತಕ್ಕದ್ದು. EMD ರಹಿತ ಟೆಂಡರ್ ದಸ್ತಾವೇಜುಗಳನ್ನು ಟೆಂಡರ್ ಪ್ರಕ್ರಿಯೆಗಾಗಿ ಪರಿಗಣಿಸಲಾಗುವುದಿಲ್ಲ. EMD ಮೊಬಲಗನ್ನು ಟೆಂಡರ್ ಪ್ರಕ್ರಿಯೆಯು ಸಂಪೂರ್ಣವಾಗಿ ಮುಕ್ತಾಯಗೊಂಡ 07 ದಿನಗಳ ಬಳಿಕ ಅರ್ಜಿಯನ್ನು ಸಲ್ಲಿಸಿ ಹಿಂಪಡೆಯಬಹುದಾಗಿದೆ. ಸದರಿ ಹಣಕ್ಕೆ ಯಾವುದೇ ರೀತಿಯ ಬಡ್ಡಿ ಇರುವುದಿಲ್ಲ.

03. ಯಶಸ್ವಿ ಟೆಂಡರುದಾರರು ಪರವಾನಿಗೆ ನೀಡಿಕೆಯ ಆದೇಶವಾದ 07 ದಿನಗಳ ಒಳಗಾಗಿ ಝುರಾಕ್ಸ ಮಶಿನ್‌ದ ಕಾರ್ಯಾಚರಣೆಯನ್ನು ಪ್ರಾರಂಭಿಸತಕ್ಕದ್ದು. ತಪ್ಪಿದ್ದಲ್ಲಿ EMD ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಹಾಗೂ 2 ನೇ ಅತೀ ಹೆಚ್ಚಿನ ಬಿಡ್ಡುದಾರರಿಗೆ ಝುರಾಕ್ಸ ಮೆಶಿನ್ ನಡೆಸಲು ಗುತ್ತಿಗೆ ನೀಡಲಾಗುವುದು.

04. ಯಶಸ್ವಿ ಟೆಂಡರುದಾರರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಧಿಸುವ ನಿಬಂಧನೆಗಳನ್ನು ಪಾಲಿಸುತ್ತೇನೆಂದು ಒಪ್ಪಂದ ಪತ್ರವನ್ನು ರೂ.100-00 ಗಳ ಛಾಪಾ ಕಾಗದದ ಮೇಲೆ ಬರೆದುಕೊಡತಕ್ಕದ್ದು ಹಾಗೂ ಕಾಲಕಾಲಕ್ಕೆ ಬದಲಾಗುವ ಇತರೆ ನಿಯಮಗಳಿಗೆ ಬದ್ಧನಾಗಿರತಕ್ಕದ್ದು.

05. ಯಶಸ್ವಿ ಟೆಂಡರುದಾರರಿಗೆ ಒಟ್ಟು ಮೂರು ವರ್ಷಗಳ ಅವಧಿಯವರೆಗೆ ಮಾತ್ರ ಝುರಾಕ್ಸ ಮಶಿನ್ ನಡೆಸಲು ಪ್ರತಿವರ್ಷ ನವೀಕರಣದ ಆಧಾರದ ಮೇಲೆ ಅನುಮತಿಸಲಾಗುವುದು ಒಂದು ವೇಳೆ ಷರತ್ತುಗಳ ಉಲ್ಲಂಘನೆ ಮಾಡಿದಲ್ಲಿ ಮತ್ತು ಯಾವುದೇ ರೀತಿಯ ದೂರುಗಳು ಬಂದಲ್ಲಿ ಅವುಗಳನ್ನು ಪರಿಶೀಲಿಸಿ ಪರವಾನಿಗೆಯನ್ನು ಯಾವುದೇ ಮುನ್ಸೂಚನೆ / ನೋಟಿಸು ನೀಡದೆ ಝುರಾಕ್ಸ ಮಶಿನ್ ಪರವಾನಿಗೆಯನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ಪರವಾನಿಗೆ ಅವಧಿ ಮುಗಿದ ಮೇಲೆ ಅಥವಾ ಮಧ್ಯದಲ್ಲಿಯೇ ರದ್ದಾದರೆ 15 ದಿನಗಳ ಒಳಗಾಗಿ ಸದರಿ ಝುರಾಕ್ಸ ಅಂಗಡಿಯನ್ನು ಖಾಲಿ ಮಾಡತಕ್ಕದ್ದು.

06. ಯಶಸ್ವಿ ಟೆಂಡರುದಾರರು ಇತ್ತೀಚಿನ ಎರಡು ಭಾವಚಿತ್ರಗಳನ್ನು, ಗುರುತಿನ ಪತ್ರ ಮತ್ತು ವಿಳಾಸದ ದಾಖಲೆಯನ್ನು ತಮ್ಮ ಅರ್ಜಿಯೊಂದಿಗೆ ಹಾಜರುಪಡಿಸತಕ್ಕದ್ದು,

07. ಯಶಸ್ವಿ ಟೆಂಡರುದಾರರು ಝುರಾಕ್ಸ ಅಂಗಡಿಯನ್ನು ಪ್ರಾರಂಭಿಸಿದ 30 ದಿನಗಳೊಳಗಾಗಿ ಸೂಕ್ತ ಪ್ರಾಧಿಕಾರದಿಂದ ಪರವಾನಿಗೆ ಪಡೆದುಕೊಂಡು, ಪರವಾನಿಗೆ ಪತ್ರದ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಪರವಾನಿಗೆಯನ್ನು ರದ್ದುಪಡಿಸಲಾಗುವುದು.

08. ಯಶಸ್ವಿ ಟೆಂಡರುದಾರರು ಈ ಕಚೇರಿಯಿಂದ ನೀಡಲಾಗುವ ಪರವಾನಿಗೆಯನ್ನು ಪ್ರತಿ ವರ್ಷ ಜಿಲ್ಲಾ ನ್ಯಾಯಾಲಯದಿಂದ ನವೀಕರಣಗೊಳಿಸಿಕೊಳ್ಳತಕ್ಕದ್ದು ಹಾಗೂ ಜಿಲ್ಲಾ ನ್ಯಾಯಾಲಯವು ಕಾಲಕಾಲಕ್ಕೆ ನಿಗಧಿಪಡಿಸುವ ಭೂ ಬಾಡಿಗೆಯನ್ನು ಭರಣಾ ಮಾಡಲು ಬದ್ಧನಾಗಿರತಕ್ಕದ್ದು.

09. ಯಶಸ್ವಿ ಟೆಂಡರುದಾರರು ಝುರಾಕ್ಸ ಮಶಿನ್ ನಡೆಸಲು ಈ ಕಚೇರಿಯಿಂದ ಆದೇಶವನ್ನು ಪಡೆದ 07 ದಿನಗಳೊಳಗಾಗಿ ಒಂದು ವರ್ಷದ ಬಾಡಿಗೆ ಹಣವನ್ನು ಮುಂಚಿತವಾಗಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್ ಸಿ., ಮುಧೋಳ ಇವರ ಕಛೇರಿಯಲ್ಲಿ ಭರಣಾ ಮಾಡತಕ್ಕದ್ದು ಒಂದು ವೇಳೆ ಯಾವುದೇ ಕಾರಣಕ್ಕೆ ಪರವಾನಿಗೆಯನ್ನು ರದ್ದು ಪಡಿಸಿದ್ದಲ್ಲಿ ಮುಂಚಿತವಾಗಿ ಭರಣಾ ಮಾಡಿದ ಬಾಡಿಗೆ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

10. ಯಶಸ್ವಿ ಟೆಂಡರುದಾರರು ರೂ.10,000-00 ಗಳ ಬಡ್ಡಿರಹಿತ ಠೇವಣಿಯನ್ನು ಪರವಾನಿಗೆ ಪಡೆದುಕೊಂಡ ದಿನದಿಂದ ಒಂದು ವಾರದೊಳಗಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರ ಕಚೇರಿಯಲ್ಲಿ ಭರಣಾ ಮಾಡತಕ್ಕದು ಹಾಗೂ ನಿಗಧಿಪಡಿಸಿದ ಭೂ ಬಾಡಿಗೆಯನ್ನು ಪರವಾನಿಗೆದಾರನು ಯಾವುದೇ ಬಾಕಿ ಉಳಿಸಿದಲ್ಲಿ ಠೇವಣಿ ಹಣದಲ್ಲಿ ಕಟಾವುಗೊಳಿಸಲಾಗುವುದು.

11. ಯಶಸ್ವಿ ಟೆಂಡರುದಾರರು ತನಗೆ ಝುರಾಕ್ಸ ಮಶಿನ್ ನಡೆಸಲು ನೀಡಿದ ಪರವಾನಿಗೆಯನ್ನು ಹಾಗೂ ಗುರುತಿನ ಚೀಟಿಯನ್ನು ಕೇಳಿದಾಗ ಹಾಜರಪಡಿಸತಕ್ಕದ್ದು ಪರವಾನಿಗೆದಾರನು ತಾನು ಮಾತ್ರ ತನಗೆ ಮಂಜೂರಾದ ಜಾಗೆಯಲ್ಲಿ ತನ್ನ ವ್ಯವಹಾರವನ್ನು ನಡೆಸತಕ್ಕದ್ದು.

12. ಯಶಸ್ವಿ ಟೆಂಡರುದಾರರು ತನ್ನನ್ನು ಬಿಟ್ಟು ಬೇರೆಯವರನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತಿಲ್ಲ ಮತ್ತು ಯಾವುದೇ ಒಳಒಪ್ಪಂದ / ಪರಭಾರೆ ಮಾಡಿಕೊಳ್ಳುವಂತಿಲ್ಲ ಅಂಥಹ ವ್ಯವಹಾರ ಮಾಡಿದ್ದು ಕಂಡುಬಂದಲ್ಲಿ ಪರವಾನಿಗೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಗೊಳಿಸಲಾಗುವುದು ಮತ್ತು ಝುರಾಕ್ಸ ಮಶಿನ್ ನಡೆಸಲು ಯಾವುದೇ ಕಾರಣಕ್ಕೂ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ.

13. ಯಶಸ್ವಿ ಟೆಂಡರುದಾರರು ಝುರಾಕ್ಸ ಮಶಿನ್ ನಡೆಸಲು ನೀಡಿದ ಪರವಾನಿಗೆಯನ್ನು ಬಿಟ್ಟು ಬೇರೆ ಯಾವುದೇ ವ್ಯವಹಾರ ಮಾಡುವಂತಿಲ್ಲ ಅಂಥಹ ವ್ಯವಹಾರ ಮಾಡಿದ್ದು ಕಂಡುಬಂದಲ್ಲಿ ಪರವಾನಿಗೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಗೊಳಿಸಲಾಗುವುದು.

14. ಯಶಸ್ವಿ ಟೆಂಡರುದಾರರು ಝುರಾಕ್ಸ ಮಶಿನ್‌ಕ್ಕೆ ಪಡೆಯುವ ವಿದ್ಯುಚ್ಛಕ್ತಿ ಬಿಲ್ಲು ಹಾಗೂ ಇತ್ಯಾದಿಗಳ ವೆಚ್ಚಗಳು ತಾನೇ ಭರಿಸತಕ್ಕದ್ದು.

15. ಯಶಸ್ವಿ ಟೆಂಡರುದಾರರು ತನ್ನ ಝುರಾಕ್ಸ ಮಶಿನ್ ವ್ಯವಹಾರವನ್ನು ಬೆಳಿಗ್ಗೆ 7-00 ಗಂಟೆಯಿಂದ ಸಾಯಂಕಾಲ 6-30 ರವರೆಗೆ ಮಾತ್ರ ನಡೆಸತಕ್ಕದ್ದು ಮತ್ತು ಸದರಿ ಸಮಯದಲ್ಲಿ ನ್ಯಾಯಾಲಯದ ಕಾರ್ಯಕಲಾಪಗಳಿಗೆ, ಕಕ್ಷಿದಾರರಿಗೆ, ನ್ಯಾಯವಾದಿಗಳಿಗೆ, ನ್ಯಾಯಾಲಯದ ಸಿಬ್ಬಂದಿಯವರಿಗೆ ಹಾಗೂ ವಾಹನಗಳ ಚಲನ-ವಲನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

16. ಝುರಾಕ್ಸ ಮಶಿನ್ ನಡೆಸುವ ಜಾಗೆಯು ನ್ಯಾಯಾಲಯದ ಉಪಯೋಗಕ್ಕಾಗಿ ಅವಶ್ಯಕವೆಂದು ಕಂಡುಬಂದಲ್ಲಿ ಪರವಾನಿಗೆದಾರನು ಸದರಿ ಜಾಗೆಯನ್ನು ನೋಟೀಸ ಮುಟ್ಟಿದ 15 ದಿನಗಳೊಳಗಾಗಿ ಖಾಲಿ ಮಾಡತಕ್ಕದ್ದು ಹಾಗೂ ಪರವಾನಿಗೆದಾರನು ಯಾವುದೇ ರೀತಿಯ ಪರಿಹಾರಕ್ಕೆ ಅರ್ಹನಾಗುವುದಿಲ್ಲ.

17. ಝುರಾಕ್ಸ ಮಶಿನ್ ನಡೆಸಲು ಬೇಕಾಗುವ ಅನುಮತಿ ಪತ್ರವನ್ನು (ಲೈಸನ್ಸ) ಝುರಾಕ್ಸ ಮಶಿನ್ ನಡೆಸುವ ಜಾಗೆಯಲ್ಲಿ ಸೂಕ್ತವಾಗಿ ಕಾಣುವಂತೆ ಪ್ರದರ್ಶಿಸತಕ್ಕದ್ದು.

18. ಸದರಿ ಝುರಾಕ್ಸ ಮಶಿನ್ ಉಪಯೋಗಕ್ಕೆ ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳಿಗೆ ಮತ್ತು ಕಾನೂನು ಬಾಹೀರ ಚಟುವಟಿಕೆಗಳಿಗೆ ಬಳಸಿಕೊಳ್ಳತಕ್ಕದ್ದಲ್ಲ, ಒಂದು ವೇಳೆ ಬೇರೆ ಯಾವುದೇ ಉದ್ಯೋಗಕ್ಕೆ / ಉದ್ದೇಶಕ್ಕೆ ಬಳಸಿಕೊಂಡಿದ್ದು ಕಂಡು ಬಂದಲ್ಲಿ ಸದರಿ ಪರವಾನಿಗೆಯನ್ನು ತತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗುವುದು.

19. ಸದರಿ ಝುರಾಕ್ಸ ಮಶಿನ್ ಕಟ್ಟಡ ಹಾಗೂ ಪರಿಸರವನ್ನು ಯಾವತ್ತೂ ಸ್ವಚ್ಛವಾಗಿ ಹಾಗೂ ಸುಸ್ಥಿತಿಯಲ್ಲಿಡತಕ್ಕದ್ದು.

20. ಝುರಾಕ್ಸ ಮಶಿನ್‌ಕ್ಕೆ ಅಳವಡಿಸಿರುವ ವಿದ್ಯುತ್ ಉಪಕರಣಗಳು, ಪೀಠೋಪಕರಣಗಳು ಹಾಗೂ ಇತರೆ ಅಳವಡಿಕೆಗಳಿಗೆ ಹಾನಿ ಸಂಭವಿಸಿದ್ದಲ್ಲಿ ಪರವಾನಿಗೆದಾರರೇ ಜವಾಬ್ದಾರಿಯಾಗಿರುತ್ತಾರೆ.

21. ಆಸಕ್ತ ಅರ್ಜಿದಾರರು ಮೇಲಿನ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರಿಗೆ ಟೆಂಡರ್ ಪ್ರಸ್ತಾವನೆಯನ್ನು ಮೊಹರಾದ ಲಕೋಟೆಯಲ್ಲಿ ಅನುಬಂಧ-1 ರಲ್ಲಿ ದಿನಾಂಕ 07.05.2024 ರಂದು 05.00 ಗಂಟೆಯ ಒಳಗಾಗಿ ಈ ಕಚೇರಿಗೆ ತಲುಪುವಂತೆ ಅಂಚೆ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ ***Tender for Running Xerox machine in Mudhol Court complex,*** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಖುದ್ದಾಗಿ ಈ ಕಚೇರಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ

22. ಮೊಹರಾದ ಲಕೋಟೆಯನ್ನು ದಿನಾಂಕಃ 08-05-2024 ರಂದು ಸಂಜೆ 05-30 ಗಂಟೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರ ಚೇಂಬರದಲ್ಲಿ ಹಾಜರಿರುವ ಟೆಂಡರುದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಒಂದು ವೇಳೆ ಸದರಿ ಸಮಯದಲ್ಲಿ ಯಾವುದೇ ಟೆಂಡರುದಾರರು ಹಾಜರಿರದ ಪಕ್ಷದಲ್ಲಿಯೂ ಸಹ ಟೆಂಡರುದಾರರ ಗೈರುಹಾಜರಾತಿಯಲ್ಲಿ ಟೆಂಡರುಗಳನ್ನು ತೆರೆದು ಟೆಂಡರು ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಈ ಕೆಳಗೆ ಸಹಿ ಮಾಡಿದವರು ಯಾವುದೇ ಕಾರಣವನ್ನು ನೀಡದೇ ಕೋಟೇಶನಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ. ಸದರೀ ಟೆಂಡರದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪ್ರತಿ ಕೆಲಸದ ವೇಳೆಯಲ್ಲಿ ಜಿಲ್ಲಾ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಿ ಪಡೆಯಬಹುದು.

6/4/24

(ಎನ್.ವಿ.ವಿಜಯ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

ಸ್ಥಳಃ ಬಾಗಲಕೋಟೆ
ದಿನಾಂಕಃ 06/04/2024

<u>ಪ್ರತಿಯನ್ನು ಪ್ರಚಾರಕ್ಕೆ ರವಾನಿಸಲಾಗಿದೆಃ</u>

01. ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆ.
02. ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಮುಧೋಳ.
03. ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಮುಧೋಳ.
04. ಕಾರ್ಯನಿರ್ವಹಣಾಧಿಕಾಗಳು, ತಾಲೂಕು ಪಂಚಾಯತ್, ಮುಧೋಳ
05. ಮಾನ್ಯ ತಹಶೀಲ್ದಾರ, ಮುಧೋಳ.
06. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬಾಗಲಕೋಟೆ ರವರಿಗೆ ಪತ್ರಿಕಾ ಪ್ರಕಟಣೆ ಕುರಿತು.
07. ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ.
08. ಅಧ್ಯಕ್ಷರು, ವಕೀಲರ ಸಂಘ ಮುಧೋಳ.
09. ಪುರಸಭೆ, ಮುಧೋಳ.
10. ಈ ನ್ಯಾಯಾಲಯದ ತಂತ್ರಾಂಶ ತಂತ್ರಜ್ಞರಿಗೆ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು.
11. ಕಚೇರಿ ಪ್ರತಿ.

# ಅನುಬಂಧ-1

ಇವರಿಗೆ,

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

ಮಾನ್ಯರೇ,

ವಿಷಯಃ ಮುಧೋಳ ನ್ಯಾಯಾಲಯದ ಆವರಣದಲ್ಲಿ ಝುರಾಕ್ಸ ಮಶಿನ್ ನಡೆಸಲು ಟೆಂಡರ್ ಸಲ್ಲಿಸುವ ಬಗ್ಗೆ.

ಉಲ್ಲೇಖಃ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ ಟೆಂಡರ್ ಪ್ರಕಟಣೆ ಸಂಖ್ಯೆ ***2/2024***, ದಿನಾಂಕಃ ***06-04-2024.***

------

ಈ ಕೆಳಗೆ ಸಹಿ ಮಾಡಿರುವ ಶ್ರೀಮತಿ / ಶ್ರೀ .................................... .................................................. ಆದ ನಾನು ಉಲ್ಲೇಖಿತ ಟೆಂಡರ್ ಪ್ರಕಟಣೆಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಮುಧೋಳ ನ್ಯಾಯಾಲಯದ ಆವರಣದಲ್ಲಿ ಝುರಾಕ್ಸ ಮಶಿನ್ ನಡೆಸಲು ಆಸಕ್ತರಿದ್ದು ಈ ಮೂಲಕ ಈ ಕೆಳಗಿನ ವಿವರಗಳೊಂದಿಗೆ ಟೆಂಡರ್ ಸಲ್ಲಿಸುತ್ತಿದ್ದೇನೆ ಮತ್ತು ಝುರಾಕ್ಸ ಮಶಿನ್ ನಡೆಸುವ ಬಗ್ಗೆ ಕರಾರನ್ನು ಮಾಡಿಕೊಳ್ಳಲು ಒಪ್ಪಿರುತ್ತೇನೆ.

| | | | |
|---|---|---|---|
| ***1*** | ಟೆಂಡರುದಾರರ ಹೆಸರು | : | |
| ***2*** | ಪೂರ್ಣ ವಿಳಾಸ | : | |
| | ಅ) ಮೊಬೈಲ್ ಸಂಖ್ಯೆ | : | |
| | ಆ) ಇ-ಮೇಲ್ ವಿಳಾಸ | : | |
| ***3*** | EMD ಮೊಬಲಗಿನ ಬಗ್ಗೆ ಡಿಮ್ಯಾಂಡ್ ಡ್ರಾಫ್ಟ್ ನ ಮೊತ್ತ ಸಂಖ್ಯೆ ಹಾಗೂ ದಿನಾಂಕ. | : | |
| ***4*** | ಈ ಹಿಂದೆ ಝುರಾಕ್ಸ ಮಶಿನ್ ನಡೆಸಿರುವ ಅನುಭವ ಹೊಂದಿದ್ದೀರಾ? | : | |

| | | | |
|---|---|---|---|
| **5** | ಸ್ವಂತವಾದ ಝುರಾಕ್ಸ ಮಶಿನ್ ಹೊಂದಿರುವಿರೋ? ವಿವರ ಸಲ್ಲಿಸಿ. | | |
| **6** | ಇತರೆ ವಿವರಗಳು (ಪ್ರತಿಗಳನ್ನು ಲಗತ್ತಿಸುವುದು) | : | |
| | ಅ) ಆಧಾರ ಕಾರ್ಡ. | : | |
| | ಆ) ಪ್ಯಾನ್ ನಂ. | : | |
| | ಇ) ಜಿ.ಎಸ್.ಟಿ. ರಿಜಿಸ್ಟ್ರೇಷನ ನಂ. | : | |
| **7** | ಅರ್ಜಿದಾರರ ಇತ್ತೀಚಿನ **2** ಸ್ಟಾಂಪ್ ಅಳತೆಯ ಭಾವಚಿತ್ರ ಲಗತ್ತಿಸಲಾಗಿದೆಯೇ? | : | |
| **8** | ಅರ್ಜಿದಾರರು ಜಿಲ್ಲಾ ನ್ಯಾಯಾಲಯವು ನಿಗಧಿಪಡಿಸುವ ಬಾಡಿಗೆ ಹಣ, ಭದ್ರತಾ ಠೇವಣಿ ಕೊಡಲು ಸಿದ್ಧರಿರುತ್ತಾರೆಯೇ ಮತ್ತು ಉಚ್ಚ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ ಹಾಗೂ ಸ್ಥಾನಿಕ ನ್ಯಾಯಾಲಯದವರು ವಿಧಿಸುವ ಕಟ್ಟಳೆಗಳಿಗೆ ಬದ್ಧರಾಗಿರುತ್ತಾರೆಯೇ? | : | |
| **9** | ಅರ್ಜಿದಾರರಿಗೆ ಪರಿಚಯ ಇರುವ ಇಬ್ಬರು ಸ್ಥಳೀಯ ಪ್ರಮುಖ ನಾಗರೀಕರ ಹೆಸರು ವಿಳಾಸ ಮತ್ತು ಸಹಿ. | : | |

ಮೇಲ್ಕಾಣಿಸಿದ ಮಾಹಿತಿಗಳು ನನ್ನ ತಿಳುವಳಿಕೆಯ ಪ್ರಕಾರ ಸರಿ ಇರುತ್ತವೆ. ಒಂದು ವೇಳೆ ಮೇಲ್ಕಾಣಿಸಿದ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ ನನ್ನ ಹೆಸರಿನಲ್ಲಿ ಮಂಜೂರಾದ ಆದೇಶವನ್ನು ರದ್ದು ಪಡಿಸುವದರ ಜೊತೆಗೆ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳಬಹದಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳಃ
ದಿನಾಂಕಃ

ಟೆಂಡರುದಾರರ ಹೆಸರು ಹಾಗೂ ಸಹಿ ಮೊಹರಿನೊಂದಿಗೆ